ಆ. ಉದ್ದೇಶಿಸಲಾಗಿದೆ.

ಇ. ಭದ್ರಾ ಜಲಾಶಯ ಹಾಗೂ ರಾಜ್ಯದ ಇತರ ಜಲಾಶಯಗಳನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸುವ ಬಗ್ಗೆ ಅಧ್ಯಯನ ನಡೆಸಲು ಪರಿಶೀಲನಾ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದ್ದು, ಸಮಿತಿಯ ವರದಿ ಬಂದ ನಂತರ ಏವರಗಳು ಲಭ್ಯವಾಗುವುವು.

ತರೀಕೆರೆ ತಾಲ್ಲೂಕು ಕೂಡ್ಲೂರು ಕೆರೆಗೆ ಮದಗದ ಕೆರೆಯಿಂದ ನೀರು ಒದಗಿಸುವ ಸಲುವಾಗಿ ಕಾಲುವೆ ಕಾಮಗಾರಿ.

1681(1897)

ಶ್ರೀ ನೀಲಕಂಠಪ್ಪ ಬಿ.ಆರ್.(ತರೀಕೆರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಕೂಡ್ಲೂರು ಕೆರಗೆ ಮದಗದ ಕೆರೆಯಿಂದ ನೀರು ಒದಗಿಸುವ ಸಲುವಾಗಿ ಕಾಲುವೆ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗದಿರುವುದರಿಂದ ಕಾಮಗಾರಿಗಳು ನಿಲುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಹಣ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಕೂಡ್ಲೂರು ಕೆರೆಗೆ ಮದಗದ ಕೆರೆಯಿಂದ ನೀರೊದಗಿಸುವುದು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಮುಖ್ಯವಾಗಿರುವುದಿಲ್ಲ.

ಆ) ಪ್ರಮೇಯವಿರುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆ ಹಣ ಖರ್ಚು ಮಾಡದೇ ಇರುವ ಬಗ್ಗೆ.

1682(1890)

ಶ್ರೀ ನೀಲಕಂಠಪ್ಪ ಬಿ.ಆರ್.:ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ಮುಜರಾಯಿ ಇಲಾಖೆಯು ಖರ್ಚು ಮಾಡದೇ ಉಳಿಸಿದ ಹಣವೆಷ್ಟು;

2. ಈ ಹಣವನ್ನು ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಿ ಖರ್ಚು ಮಾಡಲಾಗಿದೆಯೆ?

3. ಇಲ್ಲದಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ಈ ಹಣವನ್ನು ಚಿಕ್ಕಮಗಳೂರು ಜಿಲ್ಲೆಗೆ ಖರ್ಚು ಮಾಡಲಾಗುವುದೇ?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು):

1. ಕಳೆದ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ, ಮುಜರಾಯಿ ದೇವಾಲಯಗಳಿಗೆ ದುರಸ್ತಿ ಜೀರ್ಣೋದ್ಧಾರಕ್ಕೆ ರೂ.5,65,000-00ಗಳು ಮಂಜೂರಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಪ್ರತಿ ವರ್ಷ ಅನುದಾನದ ಮೇಲೆ ಬಂದ ಬಡ್ಡಿ ಹಣ ರೂ.3,77,240-00ಗಳಿದ್ದು, ಇದನ್ನು ಸರ್ಕಾರ ಆದೇಶ ನಂ.ಕಂಇ/131/ ಮುಆಬಿ/2000 ದಿನಾಂಕ: 03/11/2000 ಮತ್ತು 14/05/2001 ರಂತೆ ಇದೇ ಜಿಲ್ಲೆಯ ಇತರೆ ದೇವಾಲಯದ ದುರಸ್ತಿಗೆ ಬಿಡುಗಡೆ ಮಾಡಲಾಗಿದೆ.

2. ಸರ್ಕಾರದ ಆದೇಶ ಸಂ. ಕಂಇ/131/ಮುಆಬಿ/2000 ದಿನಾಂಕ: 14/04/ 2001 ರಂತೆ ರೂ. 1,77,240-00ಗಳನ್ನು ದಾವಣಗೆರೆ ಜಿಲ್ಲೆಗೆ ವರ್ಗಾವಣೆ ಮಾಡಿದ್ದು, ಈ ಮೊತ್ತವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲ.

3. ಸರ್ಕಾರದಿಂದ ಮಂಜೂರಾದ ಅನುದಾನವನ್ನು ಆಯಾ ಜಿಲ್ಲೆಗಳಲ್ಲಿನ ಸಂಸ್ಥೆಗಳು ಕೂಡಲೇ ಬಿಡುಗಡೆ ಮಾಡಿಸಿಕೊಂಡಲ್ಲಿ ಮಂಜೂರಾದ ಹಣ ಖರ್ಚಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರತೆ ಕಾಮಗಾರಿ.

1683(2023)

ಶ್ರೀ ಜೆ.ಡಿ.ನಾಯಕ್(ಭಟ್ಕಳ): ಮಾನ್ಯ ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?